ಲೋಕ ಧ್ವನಿ

27/11/2021

# ಭಾರತ ಸಂವಿಧಾನ ವೈವಿಧ್ಯತೆಯಲ್ಲಿ ಏಕತೆ ಹೊಂದಿದೆ: ಡಾ. ಭಟ್ಕಳ



ಶಿರಸಿ, ನ.26: ಇಲ್ಲಿಯ ಎಂಇಎಸ್ ಕಾನೂನು ಮಹಾವಿದ್ಯಾಲಯದಲ್ಲಿ 'ಸಂವಿಧಾನ ದಿನಾಚರಣೆ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ಎ.ಎನ್. ಭಟ್ಕಳ ಮಾತನಾಡಿ, ಭಾರತ ಸಂವಿಧಾನ ವೈವಿಧ್ಯತೆಯಲ್ಲಿ ಏಕತೆ ಎಂಬ ಸದೃಢ ತಳಹದಿಯನ್ನಿಟ್ಟುಕೊಂಡು ವಿಸ್ತಾರವಾದ ಮತ್ತು ಪರಿಣಾಮಕಾರಿಯಾದ ಪ್ರಾಧಾನ್ಯ ಕಾನೂನಾಗಿ ರೂಪಿಸಲಾಗಿದೆ.

ಭಾರತದ ಸಂವಿಧಾನ ರೂಪಿಸುವಾಗ ಹಲವು ದೇಶಗಳ ಸಂವಿಧಾನದಲ್ಲಿನ ಅತ್ಯುತ್ತಮ ಅಂಶಗಳನ್ನು ಅವಲೋಕಿಸಿ ಆ ಅಂಶಗಳನ್ನು ಭಾರತದ ಸನ್ನಿವೇಶಕ್ಕೆ ಹೊಂದುವಂತೆ ಪರಿವರ್ತಿಸಿ ಸೇರ್ಪಡಿಸಲಾಗಿದೆ. ಭಾರತದ ಸಂವಿಧಾನ ರಚಿಸಲು ಸುಮಾರು 3 ವರ್ಷಗಳ ಕಾಲ ಸಂವಿಧಾನ ರಚನಾಕಾರರು ಶ್ರಮಿಸಿದರು ಎಂದರು. ಭಾರತದ ಸಂವಿಧಾನದಲ್ಲಿ ದೇಶದ ಏಕತೆ, ಭದ್ರತೆ ಮತ್ತು ಅಖಂಡತೆಗೆ ಮಹತ್ವತೆಗೆ ಆದ್ಯತೆ ನೀಡಲಾಗಿದೆ. ಭಾರತದ ಸಂವಿಧಾನ ಮೂಲಭೂತ ಹಕ್ಕುಗಳನ್ನು ಒದಗಿಸುವದಲ್ಲದೆ ಕಾನೂನಾತ್ಮಕ ಹಕ್ಕುಗಳು, ಕರ್ತವ್ಯಗಳು ಮತ್ತು ಬಾಧ್ಯತೆಗಳಿಗೂ ಅವಕಾಶ ಕಲ್ಪಿಸಿದೆ. ಸಂವಿಧಾನ ದಿನಾಚರಣೆ ಸಂದರ್ಭದಲ್ಲಿ ಸಂವಿಧಾನ ರಚಿಸುವಲ್ಲಿ ಪ್ರಧಾನ ಪಾತ್ರ ವಹಿಸಿದ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಇತರ ರಚನಾಕಾರರನ್ನು ಸ್ಮರಿಸುವದು ಅಗತ್ಯ ಎಂದರು.

ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ಜನಮಾಧ್ಯಮ

# ಕಾನೂನು ಕಾಲೇಜಲ್ಲಿ ಸಂವಿಧಾನ ದಿನಾಚರಣೆ



**ಜನಮಾಧ್ಯಮ, ಶಿರಸಿ:** ಎಂ ಇ ಎಸ್ ಕಾನೂನು ಮಹಾವಿದ್ಯಾಲಯದಲ್ಲಿ ನ.26ರಂದು ಸಂವಿಧಾನ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಪ್ರಾಚಾರ್ಯ ಡಾ. ಎ ಎನ್ ಭಟ್ಕಳ ಮಾತನಾಡುತ್ತ ಭಾರತ ಸಂವಿಧಾನವು ವೈವಿಧ್ಯತೆಯಲ್ಲಿ ಏಕತೆ ಎಂಬ ಸದೃಢ ತಳಹದಿಯನ್ನು ಇಟ್ಟುಕೊಂಡು ವಿಸ್ತಾರವಾದ ಮತ್ತು ಪರಿಣಾಮಕಾರಿಯಾದ ಪ್ರಾಧಾನ್ಯ ಕಾನೂನಾಗಿ ರೂಪಿಸಲಾಗಿದೆ. ಈ ಸಂವಿಧಾನವನ್ನು ರೂಪಿಸುವಾಗ ಹಲವು ದೇಶಗಳ ಅತ್ಯುತ್ತಮ ಅಂಶಗಳನ್ನು ಅವಲೋಕಿಸಿ ಆ ಅಂಶಗಳನ್ನು ಭಾರತದ ಸನ್ನಿವೇಶಕ್ಕೆ ಹೊಂದುವಂತೆ ಪರಿವರ್ತಿಸಿ ಸೇರ್ಪಡಿಸಲಾಗಿದೆ. ಈ ಸುದಿನದಂದು ಸಂವಿಧಾನ ರಚಿಸುವಲ್ಲಿ ಪ್ರಧಾನ ಪಾತ್ರ ವಹಿಸಿದ ಡಾ. ಅಂಬೇಡ್ಕರ ಹಾಗೂ ಇತರ ರಚನಾಕಾರರನ್ನು ಸ್ಮರಿಸುವದು ಅತ್ಯಗತ್ಯವಾಗಿರುತ್ತದೆ ಎಂದರು.

ಈ ಸಂವಿಧಾನವು ಎಲ್ಲಿಯವರೆಗೆ ತನ್ನ ಅಸ್ತಿತ್ವವನ್ನು ಇಟ್ಟುಕೊಳ್ಳುತ್ತದೆಯೋ ಭಾರತೀಯರಾದ ನಾವೆಲ್ಲರೂ ಇಂತಹ ಸ್ವತಂತ್ರತೆಯನ್ನು ಸಾಂದರ್ಭಿಕವಾಗಿ ಅನುಭವಿಸಲು ಅವಕಾಶವಿದೆ. ಈ ಆಚರಣೆಯು ಕೇವಲ ಸಂಭ್ರಮಾಚರಣೆ ಆಗಿರದೇ ಸಂವಿಧಾನಿಕ ಸ್ಫೂರ್ತಿಯ ಸೆಲೆಯನ್ನು ವ್ಯವಸ್ಥಿತ ರೂಪದಲ್ಲಿ ಅಳವಡಿಸಿ ದೇಶದ ಉನ್ನತಿಗಾಗಿ ನಾವೆಲ್ಲರೂ ಸಕ್ರೀಯವಾಗಿ ಪಾಲ್ಗೊಳ್ಳಬೇಕಾಗಿರುವದು ಅತ್ಯವಶ್ಯ ಎಂದರು.

ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಬೋಧಕ-ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿ/ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.